# ಕಲಿಕಾ ಅನುಭವದಂತೆ "ಚೇತನಾಸತ್ರ"

ಆಂಗ್ಲ ಮೂಲ: ಮನೋಜ್ ಕುಮಾರ್ ತ್ರಿಪಾಠಿ
ಮತ್ತು ಶಿವ್ ಕುಮಾರ್

ಕಲಿಕೆ ಎಂಬುದೊಂದು ನಿರಂತರ ಪ್ರಕ್ರಿಯೆ. ಅದು ಎಲ್ಲಾದರು ಅಥವಾ ಎಲ್ಲೆಡೆಯೂ ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ನಡೆಯಬಹುದು. ನಾವು ಪ್ರಜ್ಞಾಪೂರ್ವಕವಾಗಿ ಕಲಿತಾಗ ಅದು ನಮ್ಮ ಜ್ಞಾನಸಂಚಯದ ಅಂಗವಾಗುತ್ತದೆ, ನಮ್ಮ ತಿಳಿವಳಿಕೆಯನ್ನು ಹೆಚ್ಚಿಸುತ್ತದೆ, ನಮ್ಮನ್ನು ಕೌಶಲಪೂರ್ಣರನ್ನಾಗಿಸುತ್ತದೆ ಹಾಗೂ ಹಿಂದಿನ ಅನುಭವ ಮತ್ತು ಕಲಿಕೆಯ ಆಧಾರದ ಮೇಲೆ ನಮ್ಮ ಜ್ಞಾನವನ್ನು ಇನ್ನಷ್ಟು ಕಟ್ಟಿಕೊಳ್ಳವಂತಹ ಅನುಭವಗಳನ್ನು ಪಡೆಯಲು ನಾವು ಸಮರ್ಥರಾಗುತ್ತೇವೆ. ಅದು ಪ್ರಯತ್ನಪೂರ್ವಕವಾಗಿರಬಹುದು, ಸನ್ನಿವೇಶಕ್ಕೆ ಅಥವಾ ಸಂದರ್ಭಕ್ಕೆ ಅನುಗುಣವಾಗಿ ಸುಗಮಗೊಂಡಿರಬಹುದು, ಸುಗಮಗೊಳ್ಳದೇ ಇರಬಹುದು ಅಥವಾ ಇನ್ನೇನೋ ಆಗಿರಬಹುದು. ಇದಕ್ಕೆ ವಿರುದ್ಧವಾಗಿ, ನಾವು ಈ ಕ್ಷಣದಲ್ಲಿಯೇ ಪ್ರಭಾವ ಬೀರದೇ ಹೋಗುವ, ಆದರೆ, ಕಾಲಾಂತರದಲ್ಲಿ ಮುಖ್ಯವೆನಿಸುವ ಹಲವು ಸಂಗತಿಗಳನ್ನು ಸಹ ಕಲಿಯುತ್ತೇವೆ. ಹೀಗಾಗಿ, ಕಲಿಕೆ ಎಂಬುದು ನಮ್ಮ ಬದುಕಿನ ಅನಿವಾರ್ಯ ಅಂಗವಾಗಿದೆ. ಅದಕ್ಕೆ ಯಾವುದೇ ಸೀಮೆ ಅಥವಾ ಮಿತಿಗಳಿರುವುದಿಲ್ಲ.

ನಮ್ಮ ಶಾಲಾಶಿಕ್ಷಣ ವ್ಯವಸ್ಥೆಯಲ್ಲಿ ಕಲಿಕೆ ಹಾಗೂ ಅದರ ಪ್ರಕ್ರಿಯೆಗಳು ಅತಿ ಮುಖ್ಯವಾಗುತ್ತವೆ. ಕಲಿಕೆ ತರಗತಿಯಲ್ಲಿ ಆಗಬಹುದು, ಪಠ್ಯಪುಸ್ತಕಗಳು, ಸುಸಜ್ಜಿತ ಪ್ರಯೋಗಾಲಯಗಳು ಮತ್ತು ಗ್ರಂಥಾಲಯಗಳ ಮೂಲಕ ಆಗಬಹುದು; ನಮ್ಮ ಎಲ್ಲ ಪ್ರಯಾಸಗಳೂ ವಿದ್ಯಾರ್ಥಿಗಳ ಕಲಿಕೆಗಾಗಿ ಮುಡಿಪಾಗಿರುತ್ತವೆ. ಆದರೆ, ಸ್ಥಾಪಿತಗೊಂಡಿದ್ದರೂ, ಅನೌಪಚಾರಿಕವಾಗಿಯೇ ಉಳಿದಿರುವ ಇನ್ನೂ ಬಹಳಷ್ಟು ವಿಧಾನಗಳು ವಿದ್ಯಾರ್ಥಿಗಳ ಕಲಿಕೆಗೆ ಕೊಡಮಾಡಿ, ಅವರ ಕಲಿಕೆಯ ಪ್ರಮುಖ ಹಾಗೂ ಅವಿಭಾಜ್ಯ ಅಂಗವಾಗಿರುತ್ತವೆ. ತರಗತಿಯಲ್ಲಿನ ಕಲಿಕೆ ಹಾಗೂ ಒಟ್ಟಾರೆ ಕಲಿಕೆಯ ಮೇಲೆ ಭಾರಿ ಪ್ರಭಾವ ಬೀರುವ ಕಲಿಕೆಯ ಬಹಳಷ್ಟು ಭಾಗ ತರಗತಿಯ ಹೊರಗೆ ನಡೆಯುತ್ತದೆ ಎಂಬುದೇ ಸತ್ಯ.

ತರಗತಿಯಲ್ಲಿ ಕಲಿಯುವುದು ತರಗತಿಯ ಹೊರಗಿನ ಅನುಭವ ಮತ್ತು ನಿರೀಕ್ಷೆಗಳೊಂದಿಗೆ ಬೆಸೆಯಲ್ಪಟ್ಟು, ನಿರೂಪಿತವಾಗಬೇಕು; ಆ ಕಲಿಕೆಯು ಸಂದರ್ಭ ಮತ್ತು ಪರಿಸರಕ್ಕೆ ಪ್ರಸ್ತುತವೆನಿಸಬೇಕು. ಆಗ ಮಾತ್ರ ಕಲಿಕೆಯೊಂದು ಮೂರ್ತ ಅನುಭವವೆನಿಸಿ, ಮುಂದಿನ ಕಲಿಕೆಗೆ ಆಧಾರ ಮತ್ತು ಅವಕಾಶ ನೀಡುವಂತಾಗುತ್ತದೆ.

ನಮ್ಮ ಶಾಲೆಗಳಲ್ಲಿ ಮಕ್ಕಳಿಗೆ ತರಗತಿಯ ಹೊರಗೆ ಕಲಿಯಲು ಹಲವು ಅವಕಾಶಗಳಿವೆ. ಮಕ್ಕಳು ತರಗತಿಯ ಹೊರಗಿನ ಚಟುವಟಿಕೆಗಳ ಮೂಲಕ ಬಹಳಷ್ಟನ್ನು ಕಲಿಯುತ್ತಾರಲ್ಲದೆ, ಅದನ್ನು ಕುತೂಹಲ ಮತ್ತು ಉತ್ಸಾಹಗಳೊಂದಿಗೆ ನಲಿವಿನಿಂದ ಕಲಿಯುತ್ತಾರೆ ಎಂಬುದು ನಮ್ಮ ಅನುಭವವಾಗಿದೆ. ಈ ಅವಕಾಶಗಳು ಮತ್ತು ಪ್ರಕ್ರಿಯೆಗಳ ಮೂಲಕ ಅವರು ಏನನ್ನೇ ಕಲಿತರೂ ಅದು ಅವರ ಇಂದಿನ ಮತ್ತು ಮುಂದಿನ ಕಲಿಕೆಯ ಮೇಲೆ ಗಾಢ ಪ್ರಭಾವ ಬೀರುತ್ತದೆ.

ಶಾಲೆಗಳಲ್ಲಿನ ಇಂತಹ ಒಂದು ಚಟುವಟಿಕೆಯೆಂದರೆ ಅದು "ಚೇತನಾಸತ್ರ" ಅಥವಾ ಬೆಳಗಿನ ಪ್ರಾರ್ಥನಾಸಭೆಯಾಗಿದೆ. ಈ ಮನಮೋಹಕ, ಉಲ್ಲಾಸಭರಿತ, ಸಂತಸದಾಯಕ, ಅನೌಪಚಾರಿಕ ಹಾಗೂ

ಪ್ರತಿಕ್ರಿಯಾತ್ಮಕ ಸ್ವರೂಪದ ಕಲಾಪವು, ತರಗತಿಯ ಹೊರಗೆ, ಶಾಲಾ ದಿನದ ಆರಂಭದಲ್ಲೇ ನಡೆಯುತ್ತದೆ. "ಚೆನ್ನಾಗಿ ಮೊದಲ್ಗೊಂಡದ್ದು ಅರ್ಧ ಮುಗಿದಂತೆಯೇ" ಎಂಬ ನಾಣ್ಣುಡಿ ಅಕ್ಷರಶಃ ಸತ್ಯ. ಶಾಲಾ ಚಟುವಟಿಕೆಯ ಆರಂಭದ ದ್ಯೋತಕವಾಗಿರುವ ಚೇತನಾಸತ್ರ ಕಾರ್ಯಕ್ರಮವು ಈ ನಾಣ್ಣುಡಿಯನ್ನು ಸಮರ್ಥಿಸುತ್ತದೆ. ಚೇತನಾಸತ್ರವು ಸಾಂಪ್ರದಾಯಿಕ ರೀತಿಯ, ಶಾಲಾ ಚಟುವಟಿಕೆಯ ಆರಂಭಕ್ಕಾಗಿ ಮಾಡುವ ಕೇವಲ ವಾಡಿಕೆಯ ಪ್ರಾರ್ಥನೆಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಇದು ಮತ್ತಷ್ಟು ಸಂಗತಿಗಳನ್ನು ಒಳಗೊಂಡು, ಒಂದು ಅತ್ಯಂತ ಪ್ರತಿಕ್ರಿಯಾತ್ಮಕ ಸ್ವರೂಪವನ್ನು ಪಡೆದುಕೊಂಡಿದೆ. ಇದು ಮಕ್ಕಳಿಗೆ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಕಲಿಯಲು, ತಮ್ಮ ಕಲಿಕೆ ಮತ್ತು ಅನುಭವಗಳನ್ನು ಹಂಚಿಕೊಳ್ಳಲು ಹಾಗೂ ವಿವಿಧ ರೀತಿಗಳಲ್ಲಿ ತಮ್ಮ ಸಾಧನೆಗಳನ್ನು ಪ್ರದರ್ಶಿಸಲು ಆಸ್ಪದವೀಯುತ್ತದೆ. ಇದನ್ನು ಬಾಲ ಸಂಸದ್ ಅಥವಾ ಮೀನಾ ಮಂಚ್ ಮೂಲಕ ಬಹುತೇಕ ಮಕ್ಕಳೇ ಸ್ವತಃ ಆಯೋಜಿಸಿ, ನಡೆಸಿಕೊಡುತ್ತಾರೆ. ಚೇತನಾಸತ್ರದ ಚಟುವಟಿಕೆಗಳು ನಮ್ಮ ಪಠ್ಯಕ್ರಮ ನಿರೀಕ್ಷೆಗಳಿಗೆ ಹಾಗೂ ತರಗತಿಯಲ್ಲಿ ದಾಟಿಸಲಾಗುವ ವಿಷಯಗಳಿಗೆ ನಿಕಟ ಸಂಬಂಧ ಹೊಂದಿರುತ್ತವೆ ಎಂಬುದು ಇಲ್ಲಿ ಹೆಚ್ಚು ಮುಖ್ಯವಾಗುತ್ತದೆ. ಸ್ಥಳೀಯ ಸಂಸ್ಕೃತಿಗೆ ಸಂಬಂಧಿಸಿದ ಹಾಗೂ ಮನಮೋಹಕ ಜಾನಪದ ಪ್ರಾರ್ಥನೆಗಳು ಹಾಗೂ ಆಗೊಮ್ಮೆ, ಈಗೊಮ್ಮೆ ಎಂಬಂತೆ ಸಾಂಸ್ಕೃತಿಕ ಸವಿಯನ್ನು ಎರೆಯುವ ಗೀತೆಗಳು ಈ ಚೇತನಾಸತ್ರದ ಜೀವಾಳವಾಗಿದ್ದು, ಇವು ಸಭೆಯ ಏಕತಾನತೆಯನ್ನು ಬದಿಗೊತ್ತಿ, ಚೇತನಾಸತ್ರದಲ್ಲಿ ಉತ್ಸಾಹ ಮತ್ತು ಶಕ್ತಿಗಳ ಸಂಚಲನವಾಗಲು ಕಾರಣವಾಗುತ್ತವೆ. ಚೇತನಾಸತ್ರದಲ್ಲಿ ಮಕ್ಕಳು ನಿಲ್ಲುವ ರಚನಾಕ್ರಮವನ್ನು ನಾವು ಒಂದರಿಂದ ಎಂಟನೇ ತರಗತಿಗಳಲ್ಲಿ ಸಾದರಪಡಿಸುವ ಗಣಿತ ಸಂಬಂಧಿತ ಪರಿಕಲ್ಪನೆಗಳಿಗೆ ಅತಿ ಸುಲಭವಾಗಿ ಹೊಂದಿಸಿಕೊಳ್ಳಬಹುದಾಗಿದೆ. ಅಷ್ಟೇ ಅಲ್ಲದೆ, ಮಕ್ಕಳು ಸಂವಾದಗಳನ್ನು ಹುಟ್ಟುಹಾಕಲು ಅಥವಾ ತಮ್ಮ ಕಲ್ಪನಾಶಕ್ತಿಯನ್ನು ಹರಿಬಿಟ್ಟು, ಚೇತನಾಸತ್ರ ಕಾರ್ಯಕ್ರಮದಲ್ಲಿ ಹಾಗೂ ತಮ್ಮ ತರಗತಿಯ ಚಟುವಟಿಕೆಗಳಲ್ಲಿ ತಮ್ಮ ಅನುಭವಗಳನ್ನು ಹೊರಹಾಕಲು ಇದು ಅವಕಾಶ ಕಲ್ಪಿಸಿಕೊಡುತ್ತದೆ. ಅದಕ್ಕಿಂತಲೂ ಹೆಚ್ಚಾಗಿ, ಚೇತನಾಸತ್ರವು ಮಕ್ಕಳಿಗೆ ಸಹಕಾರ, ಹೊಂದಾಣಿಕೆ, ಬೆಂಬಲ ಹಾಗೂ ಪರಸ್ಪರ ನಿಯಂತ್ರಣಗಳತ್ತ ಮುಖಂಡತ್ವದ ಹೆಜ್ಜೆ ಇಡುವ ಸ್ವಾತಂತ್ರ್ಯವನ್ನಷ್ಟೇ ಅಲ್ಲದೆ, ಸಮರಸಪೂರ್ಣ ಹಾಗೂ ಸೌಹಾರ್ದಯುತವಾದ ವಾತಾವರಣದಲ್ಲಿ ಸಂಸ್ಕೃತಿ ಮತ್ತು ಸ್ಥಳೀಯ ಸಂಪ್ರದಾಯಗಳ ಬಗ್ಗೆ ಆದರ ತೋರಲು ಸ್ವಾತಂತ್ರ್ಯ ನೀಡುತ್ತದೆ.

ಚೇತನಾಸತ್ರದ ಕಲಾಪಗಳನ್ನು ಸಾರ್ವಜನಿಕರು ಆಲಿಸಲು, ವೀಕ್ಷಿಸಲು ಸಾಧ್ಯವಾಗುವ ರೀತಿಯಲ್ಲಿ ನಡೆಸುವುದು ಕಡ್ಡಾಯವಾಗಿದೆ. ಇದರಿಂದ ಮಕ್ಕಳ ದನಿಯನ್ನು ಆಲಿಸಲಾಗುತ್ತಿದ್ದು, ಅವರ ಚಟುವಟಿಕೆಗಳನ್ನು ಅವರ ಪೋಷಕರು, ಪಾಲಕರು ಹಾಗೂ ಅವರ ಸಮುದಾಯ ಗಮನಿಸುತ್ತಿದ್ದು, ಅದರ ಬಗ್ಗೆ ಹಿಮ್ಮಾಹಿತಿ ಮತ್ತು ಮೆಚ್ಚುಗೆ ದೊರೆಯುತ್ತವೆ ಎಂಬ ಅರಿವು ಮಕ್ಕಳಲ್ಲಿ ಮೂಡಿ, ಅವರಲ್ಲಿನ ಹಿಂಜರಿಕೆ ತೊಲಗುವಂತಾಗುತ್ತದೆ. ಕೆಲವೊಮ್ಮೆ ಹೆಸರಾಂತ ಸ್ಥಳೀಯ ವ್ಯಕ್ತಿಗಳು, ಕುಶಲಕರ್ಮಿಗಳು, ಕಸುಬುದಾರರು ಮಕ್ಕಳನ್ನು ಉದ್ದೇಶಿಸಿ ಮಾತನಾಡುವಂತೆ ಆಹ್ವಾನಿಸಲಾಗುತ್ತದೆ. ಅವರು ತಮ್ಮ ಅನುಭವಗಳನ್ನು ಹಂಚಿಕೊಂಡು, ಮಕ್ಕಳಿಗೆ ಪ್ರಶ್ನೆ ಕೇಳುವ ಅಥವಾ ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ಅವಕಾಶ ನೀಡುತ್ತಾರೆ. ಹೀಗೆ, ಚೇತನಾಸತ್ರವೆಂಬ ಸುವಿಚಾರಿತ ಪರಿಕಲ್ಪನೆಯನ್ನು ಬಳಸಿಕೊಂಡು ಜೀವಕಳೆ ಮಿಡಿಯುವಂತಹ ಪರಿವರ್ತನೆಯೊಂದನ್ನು ಹುಟ್ಟುಹಾಕುವ ಮೂಲಕ ಸರಳ ಸ್ವರೂಪದ ಬೆಳಗಿನ ಪ್ರಾರ್ಥನಾಸಭೆಯನ್ನು ಒಂದು ಮಹತ್ತ್ವಪೂರ್ಣ ಕಲಿಕಾ ಅವಕಾಶವನ್ನಾಗಿಸಲು ಸಾಧ್ಯವಾಗಿದೆ.

ನಮ್ಮ ಶಾಲೆಯಲ್ಲಿನ ಇನ್ನೂ ಎರಡು ಸಹಭಾಗಿತ್ವದ ಪರಿಕಲ್ಪನೆಗಳೆಂದರೆ, ಬಾಲ ಸಂಸದ್ ಮತ್ತು ಮೀನಾ ಮಂಚ್. ಇವೆರಡೂ ಮಕ್ಕಳ ತರಗತಿಯ ಹೊರಗಿನ ಕಲಿಕೆಗೆ ನೇರವಾಗಿ ಸಂಬಂಧಿಸಿವೆ. ಇವೆರಡೂ ಮಕ್ಕಳಿಗಾಗಿ, ಮಕ್ಕಳಿಂದ ನಡೆಸಲ್ಪಡುವ ಪ್ರಜಾಸತ್ತಾತ್ಮಕ ವೇದಿಕೆಗಳಾಗಿದ್ದು, ಇಲ್ಲಿ ಮಕ್ಕಳು ನಾಯಕತ್ವದ, ಸಕ್ರಿಯ ಸಹಭಾಗಿತ್ವದ, ನಿರ್ಧಾರ ಕೈಗೊಳ್ಳುವ, ಸ್ವಯಂಶಿಸ್ತಿನ, ಸಹಕಾರದ, ಹೊಂದಿಕೊಂಡು ಕೆಲಸಮಾಡುವ, ಪರಸ್ಪರ ಬೆಂಬಲ ನೀಡುವ, ಹಂಚಿಕೊಳ್ಳುವ ಹಾಗೂ ಹೊಣೆಗಾರಿಕೆಗಳನ್ನು ವಿತರಿಸುವ, ಸಾಮೂಹಿಕ ಹೊಣೆಗಾರಿಕೆಯ, ತಂಡದಲ್ಲಿ ಕೆಲಸಮಾಡುವ, ತಂಡವಾಗಿ ದುಡಿಯುವ, ಉತ್ತರದಾಯಿತ್ವದ, ವಿಚಾರೋತ್ಪನ್ನದ, ಆತ್ಮವಿಶ್ಲೇಷಣೆಯ, ವಿಮರ್ಶಾತ್ಮಕ ಚಿಂತನೆಯ, ಸಂಪನ್ಮೂಲ ಗುರುತಿಸುವಿಕೆ ಮತ್ತು ಉತ್ಪಾದನೆಯ, ಆಯೋಜನೆಯ, ನಿರ್ವಹಣೆ ಮತ್ತು ಮೌಲ್ಯಮಾಪನಗಳ ಕೌಶಲಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಕಲಿಯುತ್ತಾರೆ.

ಪ್ರಧಾನ ಮಂತ್ರಿಯು ಬಾಲ ಸಂಸತ್ತಿನ ಮುಖಂಡರಾಗಿದ್ದು, ಅವರಿಗೊಬ್ಬ ಉಪ-ಪ್ರಧಾನಿಯಿರುತ್ತಾರೆ. ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ, ವಿಜ್ಞಾನ ಮತ್ತು ಗ್ರಂಥಾಲಯ, ಜಲ ಮತ್ತು ಕೃಷಿ, ಸಂಸ್ಕೃತಿ ಮತ್ತು ಕ್ರೀಡಾ ಖಾತೆಗಳಿದ್ದು, ಅವುಗಳ ಮುಖಂಡರಾಗಿ ಮಂತ್ರಿ ಹಾಗೂ ಉಪ-ಮಂತ್ರಿಗಳಿರುತ್ತಾರೆ. ಇದರ ಜೊತೆಗೆ ವಿಪತ್ತು ನಿಯಂತ್ರಣ ಖಾತೆಗೂ ಅವಕಾಶ ಕಲ್ಪಿಸಿಕೊಡಲಾಗಿದೆ. ಉಪ-ಶಿಕ್ಷಣ ಮಂತ್ರಿಯ ಖಾತೆಯನ್ನು ವಿದ್ಯಾರ್ಥಿನಿಯೇ ಭರಿಸಬೇಕಿದ್ದು, ತನ್ನ ಸ್ಥಾನಬಲದಿಂದಲೇ ಮೀನಾ ಮಂಚ್ ನ ಮುಖ್ಯಸ್ಥೆಯಾಗುವ ಅವಳನ್ನು ಮೀನಾ ಮಂತ್ರಿ ಎಂದೂ ಹೇಳಲಾಗುತ್ತದೆ. ಪ್ರತಿ ಖಾತೆಯೂ ಹದಿನೈದು ಸದಸ್ಯರ ಶಾಸಕ ಸಮಿತಿಯೊಂದನ್ನು ಹೊಂದಿದ್ದು, ಇದು ಆ ಖಾತೆಯು ನಿರ್ಬಾಧಿತವಾಗಿ ಕಾರ್ಯನಿರ್ವಹಿಸಲು ನೆರವಾಗುತ್ತದೆ. ಎಲ್ಲ ಮಂತ್ರಿಗಳು ಹಾಗೂ ಶಾಸಕಾಂಗ ಸಮಿತಿಯ ಸದಸ್ಯರೂ ಐದು ಶಾಲಾ ತಂಡಗಳಿಂದ ಚುನಾಯಿತರಾಗುತ್ತಾರೆ. ಎಲ್ಲ ಶಾಲಾ ತಂಡಗಳಿಗೂ ಸೂಕ್ತವೂ, ಅವುಗಳ ಗಾತ್ರಕ್ಕೆ ಅನುಗುಣವೂ ಆದ ಪ್ರಾತಿನಿಧ್ಯ ಇರುತ್ತದೆ. ಬಾಲ ಸಂಸತ್ತಿನ ಚಟುವಟಿಕೆಗಳನ್ನು ನಿರ್ದೇಶಿಸಿ ಸುಗಮಗೊಳಿಸಲು ಶಿಕ್ಷಕ ಸಂಚಾಲಕರೊಬ್ಬರು ನೇಮಕಗೊಳ್ಳುತ್ತಾರೆ. ಇದೊಂದು ಸ್ವಪರ್ಯಾಪ್ತವೂ, ಸುಸ್ಥಿರವೂ ಆದ ಮಾದರಿಯಾಗಿದ್ದು, ಮಕ್ಕಳಿಗೆ ಒಗ್ಗಟ್ಟಿನಿಂದ ಪ್ರಜಾಸತ್ತಾತ್ಮಕ ವಿಧಾನದಲ್ಲಿ ಕಾರ್ಯನಿರ್ವಹಿಸಲು ಅವಕಾಶ, ಆಸ್ಪದಗಳನ್ನು ನೀಡುತ್ತದೆ. ಸಂಸತ್ತಿನ ಕಾರ್ಯನಿರ್ವಾಹಕರ ಪಾತ್ರ ಮತ್ತು ಬಾಧ್ಯತೆಗಳು ಸ್ಪಷ್ಟವಾಗಿ ತೀರ್ಮಾನವಾಗಿರುತ್ತವೆ. ಪ್ರಧಾನ ಮಂತ್ರಿಯ ಮುಖಂಡತ್ವದಲ್ಲಿ ಎರಡು ವಾರಕ್ಕೊಮ್ಮೆ ಹಾಗೂ ತಿಂಗಳಿಗೊಮ್ಮೆ ಸಭೆಗಳು ನಡೆದು, ಇವುಗಳಲ್ಲಿ ಕಾರ್ಯಸೂಚಿ ಮತ್ತು ಸಮಸ್ಯೆಗಳು ಚರ್ಚಿಸಲ್ಪಡುತ್ತವೆ, ಮುಂದಿನ ಆಯೋಜನೆ ಮತ್ತು ಮೌಲ್ಯಮಾಪನಗಳ ತೀರ್ಮಾನವಾಗುತ್ತವೆ, ನಿರ್ಧಾರಗಳನ್ನು ಕೈಗೊಂಡು, ಆದ್ಯತೆಗಳನ್ನು ತೀರ್ಮಾನಿಸಲಾಗುತ್ತದೆ. ಈ ಸಭೆಗಳ ಗೋಷ್ವಾರೆ ದಾಖಲಿಸಲ್ಪಟ್ಟು, ಇದನ್ನೊಂದು ಸಾಮೂಹಿಕ ಕಲಿಕೆಗೆ ಅವಕಾಶವನ್ನಾಗಿ ಪರಿವರ್ತಿಸಲಾಗುತ್ತದೆ. ಇಲ್ಲಿ ಮಕ್ಕಳು ಹುರುಪು, ಉತ್ಸಾಹಗಳಿಂದ ಕಲಿಯುತ್ತಾರಲ್ಲದೆ, “ಇದು ನಮ್ಮ ಸಂಸತ್ತು” ಎಂಬ ಮೆಚ್ಚುಗೆಯ, ಹೆಮ್ಮೆಯ ಭಾವನೆಯೊಂದಿಗೆ ಹೊಣೆಗಾರಿಕೆ ಹಾಗೂ ಬಾಧ್ಯತೆಗಳನ್ನು ಒಪ್ಪಿಕೊಳ್ಳಲು ಸಜ್ಜಾಗುತ್ತಾರೆ.

ಹುಡುಗಿಯರ ಕಲಿಕೆಯಲ್ಲಿ ಪ್ರಗತಿ ತರುವ ಮತ್ತೊಂದು ಕ್ರಿಯಾಶೀಲ ಪ್ರಜಾಸತ್ತಾತ್ಮಕ ವೇದಿಕೆಯೆಂದರೆ ಮೀನಾ ಮಂಚ್. ಆರನೇ ತರಗತಿಯಿಂದ ಎಂಟನೇ ತರಗತಿಯ ಎಲ್ಲ ಹೆಣ್ಣುಮಕ್ಕಳೂ ಇದರ ಸದಸ್ಯರಾಗಿರುತ್ತಾರೆ. ಹಿಂದೆಯೇ ಸೂಚಿಸಿದಂತೆ, ಇದರ ಮುಖ್ಯಸ್ಥೆ ಬಾಲ ಸಂಸತ್ತಿನ ಉಪ-ಶಿಕ್ಷಣ ಮಂತ್ರಿ ಸಹ ಆಗಿರುತ್ತಾಳೆ. ಇವಳಿಗೆ

ಮೀನಾ ಮಂತ್ರಿ ಎಂದೂ ಹೇಳಲಾಗುತ್ತದೆ. ಇದರ ಚಟುವಟಿಕೆಗಳನ್ನು ನಿರ್ದೇಶಿಸಿ ಸುಗಮಗೊಳಿಸಲು ಶಿಕ್ಷಕಿಯೊಬ್ಬರು ಸಂಚಾಲಕರಾಗಿ ನೇಮಕಗೊಳ್ಳುತ್ತಾರೆ.

ಮೀನಾ ಮಂಚ್ ಸಹ ತಿಂಗಳಿಗೆ ಎರಡು ಬಾರಿ ಸಭೆ ಕರೆದು, ಶಾಲೆಯಲ್ಲಿನ ಶೈಕ್ಷಣಿಕ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಸಮಸ್ಯೆಗಳಿಗೆ ಸ್ಪಂದಿಸುತ್ತದೆ. ಶಾಲಾ ದಾಖಲಾತಿ, ಹಾಜರಾತಿ ಹಾಗೂ ವಿವಿಧ ಶಾಲಾ ಚಟುವಟಿಕೆಗಳಲ್ಲಿ ಹುಡುಗಿಯರ ಪಾಲ್ಗೊಳ್ಳುವಿಕೆಯಂತಹ ವಿಷಯಗಳಲ್ಲಿ ತೊಡಗಿಸಿಕೊಳ್ಳುವಂತೆ ಇದರ ಸದಸ್ಯರನ್ನು ಪ್ರೋತ್ಸಾಹಿಸಲಾಗುತ್ತದೆ.

ಈ ಸಭೆಯು ಶೈಕ್ಷಣಿಕ ಸಮಸ್ಯೆಗಳನ್ನು, ವೈಯಕ್ತಿಕ ಹಾಗೂ ಸಾಮುದಾಯಿಕ ಅರೋಗ್ಯ ಮತ್ತು ನೈರ್ಮಲ್ಯದ ಸಮಸ್ಯೆಗಳನ್ನು, ಬಾಲ್ಯ ವಿವಾಹ, ಬಾಲಕಾರ್ಮಿಕ ಸಮಸ್ಯೆ, ಹೆಣ್ಣುಮಕ್ಕಳ ಮೇಲಿನ ದುಷ್ಕೃತ್ಯಗಳು, ವರದಕ್ಷಿಣೆ, ಹೆಣ್ಣು ಮಗುವನ್ನು ಕುರಿತಾದ ಸಾಂಸ್ಕೃತಿಕ ಕಳಂಕಗಳು, ಸ್ತ್ರೀಭ್ರೂಣ ಹತ್ಯೆಗಳಂತಹ ಸಾಮಾಜಿಕ ಅಡೆತಡೆಗಳನ್ನು ಕುರಿತು ಚರ್ಚಿಸುತ್ತದೆ. ಈ ಸಮಸ್ಯೆಗಳನ್ನು ಕಿತ್ತೊಗೆದು, ಅವುಗಳನ್ನು ಪರಿಹರಿಸುವ ಬಗ್ಗೆ ಅರಿವನ್ನು ಪಸರಿಸುವಂತಹ ಕಾರ್ಯಕ್ರಮಗಳನ್ನು, ಚಟುವಟಿಕೆಗಳನ್ನು ಶಾಲೆಯಲ್ಲಿ ಮತ್ತು ಸಮುದಾಯದ ಮಟ್ಟದಲ್ಲಿ ಇದು ಆಯೋಜಿಸುತ್ತದೆ.

ನಡೆಯಲಿದ್ದ ಬಾಲ್ಯವಿವಾಹವನ್ನು ನಿಲ್ಲಿಸಿದಂತಹ ಹತ್ತು-ಹಲವಾರು ಯಶಸ್ಸಿನ ಕಥೆಗಳು ಮೀನಾ ಮಂಚ್ ಪಾಲಿಗೆ ಇವೆ. ಹಲವು ಶಾಲೆಗಳಲ್ಲಿ ಮೀನಾ ಮಂಚ್ ನ ಪ್ರಭಾವದಿಂದಾಗಿ ಹೆಣ್ಣು ಮಕ್ಕಳ ದಾಖಲಾತಿ ಮತ್ತು ಹಾಜರಿಗಳು ಪ್ರಚಂಡ ಹೆಚ್ಚಳ ಕಂಡಿರಲು ಕಾರಣ ಮೊದಲಿನಿಂದಲೂ ಹೆಣ್ಣುಮಕ್ಕಳ ನಿಜವಾದ ಸಬಲೀಕರಣವೇ ಇದರ ಗುರಿಯಾಗಿರುವುದಾಗಿದೆ. ಇಲ್ಲಿ ಹೆಣ್ಣು ಮಕ್ಕಳು ತಮ್ಮ ಹಕ್ಕುಗಳನ್ನು ಅರಿತುಕೊಂಡು ಸಮಾಜಕ್ಕೆ ಕೊಡಮಾಡಲು ಮುಂದಾಗುತ್ತಾರೆ. ತಾವೇ ಆಯೋಜಿಸುವ ಕಾರ್ಯಕ್ರಮಗಳ ಮೂಲಕ ಜೀವನ ಕೌಶಲಗಳನ್ನು ಗಳಿಸುತ್ತಾರೆ.

ಬಾಲ ಸಂಸತ್ತು ಮತ್ತು ಮೀನಾ ಮಂಚ್ ಎರಡನ್ನೂ ಪ್ರತಿ ಶೈಕ್ಷಣಿಕ ವರ್ಷದ ಆದಿಭಾಗದಲ್ಲೇ ರಚಿಸಲಾಗುತ್ತದೆ. ಈಗ ಬೇರೆ ಭಾಗದ ಸರ್ಕಾರಿ ಶಾಲೆಗಳು ಚುನಾವಣಾ ಆಯೋಗವು ನಡೆಸುವಂತಹ ಚುನಾವಣಾ ಪ್ರಕ್ರಿಯೆಯನ್ನು ಜಾರಿಗೆ ತಂದಿವೆ. ಈ ಪ್ರಕ್ರಿಯೆಯು ಬಾಲ ಸಂಸತ್ತಿನ ಚುನಾವಣಾ ದಿನಾಂಕದ ಘೋಷಣೆ, ಮತಪಟ್ಟಿಗಳು, ನಾಮನಿರ್ದೇಶನ, ಚುನಾವಣಾ ಪ್ರಚಾರ, ಮಾದರಿ ನೀತಿ ಸಂಹಿತೆ, ಕುಂದುಕೊರತೆಗಳ ಪರಿಹಾರ, ಚುನಾವಣಾ ಅಧಿಕಾರಿಯ ನೇಮಕ, ಮತದಾನ ಕೇಂದ್ರ ಮತ್ತು ಮತದಾನ ದಳ, ಮತ ಚೀಟಿಗಳು, ಮತಪತ್ರ, ಮತಗಳ ಎಣಿಕೆ ಹಾಗೂ ಫಲಿತಾಂಶ ಘೋಷಣೆಗಳನ್ನು ಒಳಗೊಂಡಿರುತ್ತದೆ. ಇಡೀ ಪ್ರಕ್ರಿಯೆಯು ಪ್ರಜಾತಾಂತ್ರಿಕ ಚುನಾವಣೆಯೊಂದು ನಡೆಯುವ ರೀತಿಯನ್ನು ಹಾಗೂ ಪ್ರಜಾತಂತ್ರವೊಂದರ ಪ್ರಜೆಗಳಾಗಿ ವಿದ್ಯಾರ್ಥಿಗಳಿಗೆ ಅದರ ಪ್ರಾಧಾನ್ಯವನ್ನು ಕುರಿತಾಗಿ ಒಂದು ಮಹತ್ತರ ಪಾಠವಾಗಿದೆ. ವಾಸ್ತವ ಸಂಗತಿಯೆಂದರೆ, ಈ ವೇದಿಕೆಗಳ ಮೂಲಕ ಅವರು ಸಾಂಸ್ಥಿಕ ವರ್ತನೆ, ಶಿಸ್ತು ಮತ್ತು ಆಚಾರಗಳನ್ನು ರೂಢಿಸಿಕೊಳ್ಳುತ್ತಾರೆ.

ಶಾಲಾ ವಿಪತ್ತು ನಿರ್ವಹಣಾ ಸಮಿತಿ (SDMC)ಯು ಇಂತಹ ಮತ್ತೊಂದು ವೇದಿಕೆಯಾಗಿದ್ದು, ಇದರಲ್ಲಿ ಮಕ್ಕಳು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಶಾಲೆಯಲ್ಲಿ ಮತ್ತು ತಾವು ವಾಸಿಸುವ ಬಡಾವಣೆಗಳಲ್ಲಿ

ಸಂಭವಿಸಬಹುದಾದ ವಿಪತ್ತುಗಳನ್ನು ಗುರುತಿಸಲು ಕಲಿಯುತ್ತಾರೆ. ಜನಜೀವನ ಮತ್ತು ಆಸ್ತಿಗಳಿಗೆ ಎಂತೋ, ಅಂತೆಯೇ ಪ್ರಕೃತಿಯನ್ನು ಬಾಧಿಸಬಲ್ಲ ಸಂಭಾವ್ಯ ವಿಪತ್ತುಗಳನ್ನು ಗುರುತಿಸಲು ಅವರು ಕಲಿಯುತ್ತಾರೆ. ಅವರು ರಕ್ಷಣೆಯ ಪ್ರಕ್ರಿಯೆಗಳು, ಪ್ರಥಮ ಚಿಕಿತ್ಸೆ, ಪುನರ್ವಸತಿಗಳ ಬಗ್ಗೆಯೂ ಕಲಿಯುತ್ತಾರೆ. ಬಹುಪಾಲು ಮಕ್ಕಳೇ ಇರುವ ಹಾಗೂ ಬಾಲ ಸಂಸತ್ತಿನ ಎಲ್ಲ ಸಚಿವರು, ಮೀನಾ ಮಂತ್ರಿ, ಪ್ರಧಾನ ಶಿಕ್ಷಕರೊಬ್ಬರು, VSS ಅಧ್ಯಕ್ಷರು ಹಾಗೂ ಮೂವರು ಬಾಲ ಪ್ರೇರಕರು (ಅಂದರೆ, ಇತರ ವಿದ್ಯಾರ್ಥಿಗಳಿಗೆ ವಿಭಿನ್ನ ವಿಪತ್ತುಗಳಿಗೆ ಸಂಬಂಧಿಸಿದಂತೆ ಪ್ರತಿ ಶನಿವಾರವೂ ಅಣಕು ಡ್ರಿಲ್ (mock drill) ಮತ್ತು ವ್ಯಾಯಾಮಾಭ್ಯಾಸಗಳ ಮೂಲಕ ತರಬೇತಿ ನೀಡುವ ಸಹಪಾಠಿ ಶಿಕ್ಷಕರು) ಒಳಗೊಂಡಂತೆ ಹನ್ನೆರಡರಿಂದ ಹದಿಮೂರು ಸದಸ್ಯರ ಸಮಿತಿಯೊಂದು ಅಸ್ತಿತ್ವದಲ್ಲಿರುತ್ತದೆ. ಬಿಹಾರ ರಾಜ್ಯವು ಮೇಲಿಂದ ಮೇಲೆ ಪ್ರವಾಹ, ಕ್ಷಾಮ ಹಾಗೂ ಇತರ ಪ್ರಕೃತಿ ವಿಕೋಪಗಳಿಗೆ ತುತ್ತಾಗುವುದರಿಂದ, ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣೆ ಸಮಿತಿಯ ಪಾತ್ರವು ರಕ್ಷಣೆ ಮತ್ತು ಪುನರ್ವಸತಿ ಪ್ರಕ್ರಿಯೆಗಳಲ್ಲಿ ಮಾತ್ರವಲ್ಲದೆ, ಮಕ್ಕಳ ಕ್ರಮಬದ್ಧ ಶಿಕ್ಷಣ ಪ್ರಕ್ರಿಯೆಯ ಮುಂದುವರಿಕೆಯಲ್ಲಿಯೂ ನಿಚ್ಚಳವಾಗಿ ಗೋಚರವಾಗುತ್ತಿದೆ. ಹೀಗಾಗಿ, ಪ್ರಕೃತಿ ವಿಕೋಪಗಳ ಬಗ್ಗೆ, ಮಾನವ ನಿರ್ಮಿತ ವಿಪತ್ತುಗಳನ್ನು ತಡೆಗಟ್ಟುವ, ನಿಯಂತ್ರಿಸುವ, ಅವುಗಳಿಂದ ಕಾಪಾಡುವ ಹಾಗೂ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಿಕೊಡುವ ವಿಚಾರದ ಬಗೆಗಿನ ಕಲಿಕೆಯು ಒಂದು ಸಂಘಟಿತ ಹಾಗೂ ಸ್ವಾಭಾವಿಕ ಪ್ರಕ್ರಿಯೆಯಾಗಿದ್ದು, ಡ್ರಿಲ್ ಮತ್ತು ವ್ಯಾಯಾಮದಂತಹ ಅಭ್ಯಾಸಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು ಇದನ್ನೊಂದು ಬಹು ಆನಂದದಾಯಕ ಪ್ರಕ್ರಿಯೆಯನ್ನಾಗಿಸುತ್ತದೆ. ಇದಕ್ಕೂ ಮಿಗಿಲಾಗಿ, ಸರ್ವವಿಧದ ರಕ್ಷಣೆಯನ್ನು ಖಾತ್ರಿಪಡಿಸಲು ಅವರು ತಾವು ಕಲಿಯುವುದನ್ನು ಇಡೀ ಸಮುದಾಯದೊಂದಿಗೆ ಹಂಚಿಕೊಳ್ಳುತ್ತಾರೆ.

"ಪೋಷಣ್ ವಾಟಿಕಾ" (ಮಧ್ಯಾಹ್ನದ ಬಿಸಿಯೂಟ) ಪರಿಕಲ್ಪನೆ ಸಹ ತರಗತಿಯ ಹೊರಗೆ ಮಕ್ಕಳು ಕಲಿಯುವಂತೆ ನೋಡಿಕೊಳ್ಳುತ್ತದೆ. ಸಮಾನತೆ ಮತ್ತು ನಿಷ್ಪಕ್ಷಪಾತಗಳ ಪ್ರಾಮುಖ್ಯವನ್ನು, ಆಹಾರ ಯಾಕೆ ಮುಖ್ಯ ಹಾಗೂ ಅಹಾರದ ಸಂರಕ್ಷಣೆಯನ್ನು, ಆರೋಗ್ಯ ಮತ್ತು ನೈರ್ಮಲ್ಯವನ್ನು, ತಮ್ಮ ವೈಯಕ್ತಿಕ ಹಾಗೂ ಸಾಮೂಹಿಕ ಹೊಣೆಗಾರಿಕೆಯನ್ನು, ಸಮುದಾಯದ ಜೀವನದ ಬಗೆಗಿನ ಪಾಠಗಳನ್ನು ಮಕ್ಕಳು ಕಲಿಯುತ್ತಾರೆ. ಇತರೆ ಲಾಭಗಳೆಂದರೆ, ಬೇಸಾಯ, ಸಸ್ಯಗಳ ಪೌಷ್ಟಿಕ ಮೌಲ್ಯ ಹಾಗೂ ನಮ್ಮ ದಿನನಿತ್ಯದ ಆರೋಗ್ಯಕರ ಬದುಕಿನಲ್ಲಿ ಅವುಗಳ ಪಾತ್ರಗಳ ವಿಷಯವಾಗಿ ಮಕ್ಕಳ ಸಂವೇದನಾಶಕ್ತಿಯನ್ನು ಚುರುಕುಗೊಳಿಸುವುದಾಗಿದೆ. ಅವರು ದುಡಿಮೆಯ ಬೆಲೆ ಏನು ಎಂಬುದನ್ನು ಕಲಿತು, ತಮ್ಮ ಜೀವನದಲ್ಲಿ ಇತರರ ಕೊಡುಗೆಗಳನ್ನು ಆದರಿಸಲು ಸಹ ಕಲಿಯುತ್ತಾರೆ.

ಮಕ್ಕಳ ನಿಜವಾದ ಕಲಿಕೆಯು ತರಗತಿಗೆ ಅಥವಾ ತರಗತಿಯ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಶಾಲೆಯ ಹೊರಗೆ ಕಲಿಯಲು ಅವರಿಗೆ ಸದಾ ವಿಪುಲ ಅವಕಾಶಗಳಿರುತ್ತವೆ. ಮಕ್ಕಳು ವಾಸ್ತವವಾಗಿ ಸಂದರ್ಭ, ತಮ್ಮ ನೆರೆಹೊರೆ, ಸಾಂಸ್ಥಿಕ ಸಂರಚನೆಗಳು, ಸಮುದಾಯ ಹಾಗೂ ಇನ್ನೂ ಹಲವು ಸಂಗತಿಗಳಿಂದ ಕಲಿಯುತ್ತಾರೆ. ನಾವು ಅವರನ್ನು ತರಗತಿಯ ನಾಲ್ಕು ಗೋಡೆಗಳ ಮಧ್ಯೆ ಬಂಧಿಸದೇ, ಅವರು ಪುಸ್ತಕದ ಹುಳುಗಳಾಗದಂತೆ ನೋಡಿಕೊಂಡರಾಯಿತು. ಅನುಭವಾತ್ಮಕ ಕಲಿಕೆಯ ಆನಂದವನ್ನು ಅವರು ಸವಿಯುವುದನ್ನು ನಾವು ಸುಗಮಗೊಳಿಸಬೇಕಿದೆ. ಕಲಿಕೆಯ ದಿಗಂತ ವಿಸ್ತಾರವಾಗಿದ್ದು, ಗಗನವೇ ಅದಕ್ಕೆ ಮಿತಿ.

**ಮನೋಜ್ ಕುಮಾರ್ ತ್ರಿಪಾಠಿ** ಅವರು ಬಿಹಾರದ ಭೋಜಪುರ್ ಜಿಲ್ಲೆಯ ಆರಾ ವಿಭಾಗದ ಭೇಲ್ಲುಮಾರ್ ಗ್ರಾಮದ ಉತ್ಕ್ರಮಿತ್ ಮಧ್ಯ ವಿದ್ಯಾಲಯದ ಮುಖ್ಯ ಶಿಕ್ಷಕರಾಗಿದ್ದಾರೆ. ಇವರು, ಭೋಜಪುರ ಜಿಲ್ಲೆಯ ಪಿರೌಟಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಹಾಗೂ ಬಿಹಾರ ರಾಜ್ಯದ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಪರಿಷತ್ತುಗಳ ಜೊತೆ ನಿಕಟವಾಗಿ ತೊಡಗಿಸಿಕೊಂಡಿದ್ದಾರೆ. "ಬಿಹಾರದ ಶಿಕ್ಷಕರು: ಪರಿವರ್ತನಕಾರರು" ಎಂಬ ಅಂತರ್ಜಾಲ ಆಧಾರಿತ ಶೈಕ್ಷಣಿಕ ಪೋರ್ಟಲ್ ಹಾಗೂ ಕಲಿಕಾ-ಸಮುದಾಯದ ಸ್ಥಾಪಕರಾಗಿರುವ ಇವರನ್ನು ಸಂಪರ್ಕಿಸಬಹುದಾದ ಮಿಂಚಂಚೆ ವಿಳಾಸ: manojtripathy365@gmail.com

**ಶಿವ್ ಕುಮಾರ್** ಅವರು ಬಿಹಾರದ ಪಟ್ನಾ ಜಿಲ್ಲೆಯ ಬಿಕ್ರಮ್ ವಿಭಾಗದ ಮೋರಿಯಾವಾಂ ಗ್ರಾಮದ ಕಪಿಲ್ ದೇವ್ ಮಧ್ಯ ವಿದ್ಯಾಲಯದ ಕ್ಲಸ್ಟರ್ ಸಂಪನ್ಮೂಲ ಕೇಂದ್ರದ ಸಂಚಾಲಕರಾಗಿದ್ದಾರೆ. ಇವರು ಬಿಹಾರ ರಾಜ್ಯದ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಪರಿಷತ್ತು ಹಾಗೂ ಪಟ್ನಾದ ಬಿಹಾರ್ ಶಿಕ್ಷಣ ಯೋಜನಾ ಪರಿಷತ್ತಿನೊಂದಿಗೆ ನಿಕಟ ಸಂಪರ್ಕದಲ್ಲಿದ್ದಾರೆ. ಇವರು ಆರಂಭಿಕ ಶಿಕ್ಷಣದಲ್ಲಿ ಡಿಪ್ಲಮೋ ವಿದ್ಯಾರ್ಥಿಗಳಿಗಾಗಿ ಅಧ್ಯಯನ ಸಾಮಗ್ರಿ, ಲಘು ಚಲನಚಿತ್ರಗಳು, ಕಸುಬಿನಲ್ಲಿ ತೊಡಗಿರುವಂತೆಯೇ ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ತರಬೇತಿ ನೀಡುವ ಘಟಕಗಳ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. "ಬಿಹಾರದ ಶಿಕ್ಷಕರು: ಪರಿವರ್ತನಕಾರರು" ಎಂಬ ಶೈಕ್ಷಣಿಕ ಪೋರ್ಟಲ್ ಹಾಗೂ ಕಲಿಕಾ-ಸಮುದಾಯದ ಸ್ಥಾಪಕರೂ ಆದ ಇವರನ್ನು ಸಂಪರ್ಕಿಸಬಹುದಾದ ಮಿಂಚಂಚೆ ವಿಳಾಸ: shivkumar800@gmail.com

===========